**ಸಾಕ್ಷಿಯನ್ನು ದಿನಾಂಕಃ 29-08-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ವಾದಿ ಪರ ವಕೀಲರವರಿಂದಃ**

2 ನೇ ವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. 1 ನೇ ವಾದಿ 2 ನೇ ವಾದಿ ಹಾಗೂ 1 ನೇ ಪ್ರತಿವಾದಿಯ ಮಗಳು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ತಾಯಿ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯ ಹೆಸರು ಚಂದ್ರಶೇಖರಯ್ಯ ಎಂದು ಇರುವುದು. ಚಂದ್ರಶೇಖರಯ್ಯ ಹಾಗೂ ಗಿರಿಜಮ್ಮ ಇವರಿಗೆ ಮೂರು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬಾತ ಮಗನಿರುವನು. ಅವರ ಹೆಣ್ಣು ಮಕ್ಕಳ ಹೆಸರುಗಳೆಂದರೆ ಭಾಗ್ಯಮ್ಮ, ಸುಮಿತ್ರಮ್ಮ, ಮಂಜಮ್ಮ. ದಾವಾ ಆಸ್ತಿ ಮೂಲತಃ 1 ನೇ ಪ್ರತಿವಾದಿಯ ತಂದೆಯಾದ ಚಂದ್ರಶೇಖರಯ್ಯ ಹೆಸರಿನಲ್ಲಿತ್ತು ಎಂದರೆ ಸರಿ. ಚಂದ್ರಶೇಖರಯ್ಯನಿಗೆ 1 ನೇ ಪ್ರತಿವಾದಿ ಹಾಗೂ ಆತನ ಮೂರು ಜನ ಸಹೋದರಿಯರು ವಾರಸುದಾರರು ಎಂದರೆ ಇರಬಹುದು. ನನ್ನ ಪ್ರತಿವಾದ ಪತ್ರದಲ್ಲಿ 2 ನೇ ವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದು, 1 ನೇ ವಾದಿ 1 ನೇ ಪ್ರತಿವಾದಿಯ ಮಗಳು ಎಂದು ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ.

2 ನೇ ವಾದಿ ಹಾಗೂ 1 ನೇ ಪ್ರತಿವಾದಿಯ ವಿವಾಹವು ದಿಃ 24.10.1985 ರಂದು ಆಗಿದೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ವಿವಾಹವು ನೊಂದಣಿಯಾಗಿರುವುದು ಎಂದರೆ ನನಗೆ ಗೊತ್ತಿಲ್ಲ. ವಿವಾಹವಾಗಿ 4 ವರ್ಷಗಳ ನಂತರ ಅವರ ಮಧ್ಯೆ ವೈಮಸ್ಸು ಉಂಟಾಯಿತು ಎಂದರೆ ನನಗೆ ಅವರ ವಿವಾಹದ ಮಾಹಿತಿ ಇರುವುದಿಲ್ಲ. 2 ನೇ ವಾದಿ 1 ನೇ ಪ್ರತಿವಾದಿಯನ್ನು ತ್ಯಜಿಸಿ ಸಂಡೂರಿನ ಫ್ಯಾಕ್ಟರಿಯಲ್ಲಿ 1988 ರಿಂದ 1992 ರವರೆಗೆ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮದುವೆಯಾಗಿ 4 ವರ್ಷಗಳ ನಂತರ 1 ನೇ ಪ್ರತಿವಾದಿ ಹೆಂಡತಿ ಹಾಗೂ ಮಗಳನ್ನು ತ್ಯಜಿಸಿದ್ದರು ಎಂದರೆ ಸರಿಯಲ್ಲ. ಈಗ ಸುಮಾರು 30-35 ವರ್ಷಗಳಿಂದ 1 ನೇ ಪ್ರತಿವಾದಿ 1 ನೇ ವಾದಿಯೊಂದಿದೆ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರನ್ನು 1 ನೇ ಪ್ರತಿವಾದಿ ನಿರ್ಲಕ್ಷಿಸಿದ ಕಾರಣ ಪಂಚಾಯಿತಿ ನಡೆದಿರುವುದು ಎಂದರೆ ಸರಿಯಲ್ಲ. ಸದರಿ ಪಂಚಾಯಿತಿಯಲ್ಲಿ ವಾದಿಯರಿಗೆ ದಾವಾ ಆಸ್ತಿಯನ್ನು ಕೊಡಲಾಯಿತು ಎಂದರೆ ಸರಿಯಲ್ಲ. ಅಂದಿನಿಂದ ಇಂದಿನವರೆಗೂ ವಾದಿಯರು ದಾವಾ ಸ್ವತ್ತಿನ ಅನುಭವದಲ್ಲಿರುವರು ಎಂದರೆ ಸರಿಯಲ್ಲ.

ಇಂದಿಗೂ ಕೂಡ 2 ನೇ ದಾವಾ ಆಸ್ತಿಯಲ್ಲಿ ವಾದಿಯರು ವಾಸು ಮಾಡುತ್ತಿರುವವರು ಎಂದರೆ ಸರಿಯಲ್ಲ. 2 ನೇ ದಾವಾ ಆಸ್ತಿ ಇಂದಿಗೂ ಕೂಡ ಚಂದ್ರಶೇಖರಯ್ಯನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಾನು ಹಾಗೂ 1 ನೇ ಪ್ರತಿವಾದಿ ಮೀಲಾಪಿಯಾಗಿ ದಿಃ 28.02.1996 ರಂದು ಸುಳ್ಳು ಕರಾರನ್ನು ಸೃಷ್ಠಿಸಿದ್ದೇವೆ ಎಂದರೆ ಸರಿಯಲ್ಲ. 1996 ನೇ ಸಾಲಿನಲ್ಲಿ 1 ನೇ ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಅದೇ ರೀತಿ 2 ನೇ ದಾವಾ ಆಸ್ತಿ ಆತನ ತಂದೆಯಾದ ಚಂದ್ರಶೇಖರಯ್ಯನ ಹೆಸರಿನಲ್ಲಿತ್ತು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು 1 ಮತ್ತು 2 ದಾವಾ ಆಸ್ತಿಯ ಸಂಪೂರ್ಣ ಮಾಲೀಕರು ಅಲ್ಲ ಎಂದರೆ ಸರಿಯಲ್ಲ. 1996 ನೇ ಸಾಲಿನಿಂದ ವಾದಿಯರು ದಾವಾ ಆಸ್ತಿಯ ಸ್ವಾಧೀನ ಅನುಬೋಗದಲ್ಲಿರುವವರು ಎಂದರೆ ಸರಿಯಲ್ಲ. ಸಂಪೂರ್ಣ ಮಾಲೀಕತ್ವ ಇರದ ಕಾರಣ 1 ಮತ್ತು 2 ನೇ ಪ್ರತಿವಾದಿಗಳಿಗೆ ನನಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲಿನ ಮಾಲ್ಕಿ ಹಕ್ಕು ಮತ್ತು ಸ್ವಾಧೀನವನ್ನು ನಷ್ಟ ಗೊಳಿಸಲು ದಿಃ28.10.1996 ರಂದು ಸುಳ್ಳು ಖರೀದಿ ಕರಾರನ್ನು ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಇದೇ ನ್ಯಾಯಾಲಯದಲ್ಲಿ ಓ.ಎಸ್.ನಂ.65/2013 ದಾವೆಯನ್ನು ದಾಖಲಿಸಿದ್ದೇನು ಎಂದರೆ ಸರಿ. ಸದರಿ ದಾವೆಯನ್ನು ಡೋರ್ ನಂ.10 ಮತ್ತು 11 ಆಸ್ತಿಗಳ ಮೇಲೆ ಮತ್ತು ಈ ದಾವೆಯಲ್ಲಿರುವ ಜಮೀನುಗಳ ಮೇಲೆ ದಾಖಲು ಮಾಡಿದ್ದೇನೆ ಎಂದರೆ ಸರಿ. ಸದರಿ ಡೋರ್ ನಂ.10 ಚಂದ್ರಶೇಖರಯ್ಯನ ಹೆಸರಿನಲ್ಲಿತ್ತು. ನಿಪಿ-13 ಮತ್ತು ದಾಖಲೆಗಳು ಮಂಜಮ್ಮನ ಹೆಸರಿನಲಿಲವೆ ಎಂದರೆ ಸರಿ. 10 ನೇ ದಾವಾ ಆಸ್ತಿ ನಾನು ದಾವಾ ದಾಖಲು ಮಾಡಿದ ಕಾಲಕ್ಕೆ ಮತ್ತು ಈಗಲೂ ಸಹ ಮಂಜಮ್ಮನ ಹೆಸರಿನಲ್ಲಿವೆ ಎಂದರೆ ಸರಿ. ಓ.ಎಸ್.ನಂ.65/2013 ರಲ್ಲಿ ಮಂಜಮ್ಮಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ದಾವೆಯನ್ನು ನಾನು ವೀರಬಸಯ್ಯ ಹಾಗೂ ಅವರ ತಾಯಿ ಗಿರಿಜಮ್ಮನ ವಿರುದ್ಧ ಮಾತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ಆ ಕೇಸಿನಲ್ಲಿ ವೀರಬಸಯ್ಯ ಹಾಗೂ ಪಾರ್ವತಮ್ಮನ ಬೇರೆ ವಾರಸುದಾರರನ್ನು ಪಾರ್ಟಿ ಮಾಡಿರುವುದಿಲ್ಲ ಎಂದರೆ ಸರಿ.

ಓ.ಎಸ್.ನಂ.65/2013 ದಾವೆಯನ್ನು ಶ್ರೀ ಶಾಂತಮೂರ್ತಿ ವಕೀಲರ ಮೂಲಕ ಹಾಕಿದ್ದೇನು ಎಂದರೆ ಸರಿ. ದಿಃ22.03.2013 ರಂದು ಸದರಿ ದಾವೆಯು ಪ್ರತಿವಾದಿಗಳ ಹಾಜರಾತಿಗಾಗಿ ನಿಗದಿಯಾಗಿತ್ತು ಎಂದರೆ ಸರಿ. ಮರುದಿನ ಅಂದರೆ ದಿಃ 23.03.2013 ರಂದು ಸದರಿ ದಾವೆಯನ್ನು ಕಾಂಪ್ರಮೈಸ್ ನಲ್ಲಿ ಮುಕ್ತಾಯ ಮಾಡಿದ್ದೇವೆ ಎಂದರೆ ಸರಿ.

ಸದರಿ ದಾವೆಯಲ್ಲಿ ನಾನು ಗಿರಿಜಮ್ಮನ ವಿರುದ್ಧ ಮಾಡಿದ್ದ ದಾವೆಯನ್ನು ಹಿಂದಕ್ಕೆ ಪಡೆದು ವಜಾಗೊಳ್ಳಿಸಬೇಕು ಎಂಬ ಷರತ್ತು ಇತ್ತು ಎಂದರೆ ಅದು ನಮ್ಮ ವಕೀಲರಿಗೆ ಗೊತ್ತಿದೆ. ವಾದಿಯರಿಗೆ ಹಾಗೂ 2 ನೇ ಪ್ರತಿವಾದಿಯಾದ ಗಿರಿಜಮ್ಮನಿಗೆ ಗೊತ್ತಾಗದಂತೆ ಅವರನ್ನು ದೂರ ಇಟ್ಟು ಸುಳ್ಳಾಗಿ ಓ ಎಸ್ 65/2013 ನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಗಿರಿಜಮ್ಮನ ಸಹಿ ಕಂಡುಬರುವುದಿಲ್ಲ ಎಂದರೆ ಸಾಕ್ಷಿಯು ಹೆಬ್ಬೆಟ್ಟು ಇರುತ್ತದೆ ಎಂದು ನುಡಿದರು. ನಿಪಿ-1 ರಲ್ಲಿ ಯಾವುದೇ ಹೆಬ್ಬೆಟ್ಟಿನ ಗುರುತು ಕಂಡು ಬರುವುದಿಲ್ಲ ಎಂದರೆ ಸರಿ.

ನಿಪಿ-3 ರಲ್ಲಿ ಬಾಕಿ ಮೊತ್ತವನ್ನು ಪಡೆದುಕೊಳ್ಳಲು ಮಾತ್ರ ಇರುವುದು ಮತ್ತು ಎಷ್ಟು ಮೊತ್ತ ಇಲ್ಲ ಎಂದರೆ ಸರಿ. ಓ ಎಸ್ 65/2013 ರಲ್ಲಿನ 2 ಮತ್ತು 3 ನೇ ದಾವಾ ಆಸ್ತಿಗಳು ಈ ಕೇಸಿನ 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿಲ್ಲ ಎಂದರೆ ಸಾಕ್ಷಿಯು ಜಮೀನು ವೀರಭಸಯ್ಯನ ಹೆಸರಿನಲ್ಲಿತ್ತು ಆದರೆ ಡೋರ್ ನಂಬರ್ ಇರಲಿಲ್ಲ ಎಂದು ನುಡಿದರು. ಸದರಿ ದಾವೆಯಲ್ಲಿ 2 ಮತ್ತು 3 ನೇ ದಾವಾ ಆಸ್ತಿಗಳು ವೀರಭಸಯ್ಯ ಹಾಗೂ ಗಿರಿಜಮ್ಮನ ಹೆಸರಿನಲ್ಲಿ ಇರಲಿಲ್ಲ ಎಂಬ ವಿಚಾರವನ್ನು ನ್ಯಾಯಾಲಯದ ಗಮನಕ್ಕೆ ತರದೆ ನಾವು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ರಾಜಿ ಡಿಕ್ರಿಯಾಧಾರದ ಮೇಲೆ ನಾವು ಈ ನ್ಯಾಯಾಲಯದಲ್ಲಿ ಅಮಲ್ಜಾರಿ ಪ್ರಕರಣವನ್ನು ದಾಖಲಿಸಿದ್ದೆವು ಎಂದರೆ ಸರಿ. ರಾಜಿ ಅರ್ಜಿ ಸಲ್ಲಿಸಿದ ನಂತರ ನ್ಯಾಯಾಲಯದ ಮುಖಾಂತರ ಸದರಿ ರಾಜಿ ಅರ್ಜಿ ಡಿಕ್ರಿಯನ್ನು ನೊಂದಣಿ ಮಾಡಿಸಿರುವುದಿಲ್ಲ ಎಂದರೆ ಸರಿ.

ರಾಜಿ ಅರ್ಜಿ ಸಲ್ಲಿಸಿದ ನಂತರ ಖರೀದಿ ಪತ್ರವನ್ನು ನ್ಯಾಯಾಲಯದ ಮುಖಾಂತರ ನೊಂದಣಿ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ನಿಡಿ-7 ನ್ನು ಈ ದಾವೆ ಚಾಲ್ತಿಯಲ್ಲಿದ್ದಾಗ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ನಿಡಿ-7 ನ್ನು ಅಮಲ್ಜಾರಿ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದ ಆಧಾರದ ಮೇಲೆ ನೊಂದಣಿ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ರಾಜಿ ಸಂದಾನ ಮುಖಾಂತರ ಮಾಡಿಕೊಂಡಿದ್ದೇವೆ ಎಂದು ನುಡಿದರು. ರಾಜಿ ಡಿಕ್ರಿ ಪ್ರಕಾರ ಮಾಡಿಕೊಡುತ್ತೇವೆ ಎಂದು ಹೇಳಿದ ಕಾರಣ ನಿಡಿ-7 ನ್ನು ಬರೆಸಿಕೊಂಡಿರುತ್ತೇನೆ. ನ್ಯಾಯಾಲಯದ ಅನುಮತಿಯನ್ನು ಪಡೆದು ನಿಡಿ-7 ನ್ನು ಬರೆಸಿಕೊಂಡಿರುವುದಿಲ್ಲ ಎಂದರೆ ಸರಿ.

ನಾನು ಹಾಗೂ 1 ನೇ ಪ್ರತಿವಾದಿ ವಿಶ್ವಾಸಿಕರು ಎಂದರೆ ಸರಿಯಲ್ಲ. ವಾದಿಯರಿಗೆ ಹಾಗೂ ಚಂದ್ರಶೇಖರಯ್ಯನ ಉಳಿದ ವಾರಸುದಾರರಿಗೆ ನಷ್ಟ ಉಂಟುಮಾಡಲು ರಾಜಿ

ಡಿಕ್ರಿಯನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-7 ಕ್ಕೆ ವೀರಬಸಯ್ಯನ ಹೊರತು ಬೇರೆ ಯಾರು ಸಹಿ ಮಾಡಿರುವುದಿಲ್ಲ ಮತ್ತು ಬೇರೆ ಯಾರು ಭಾಗವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಓ ಎಸ್ 65/2013 ನ್ನು ಮೂಲ ಕುಟುಂಬದ ಆಸ್ತಿಗಳಿಗೆ ಸಂಬಂಧ ಪಟ್ಟಂತೆ ರಾಜಿ ಮಾಡಿಕೊಂಡಿದ್ದು ಉಳಿದ ಎರಡು ಆಸ್ತಿಗಳನ್ನು ಬರೆದುಕೊಡುವಂತೆ ನಾನು ಕೇಳಿಕೊಂಡಿದ್ದೇನೆ. ನಿಡಿ-7 ನ್ನು ಮಾಡಿಕೊಳ್ಳುವ ಕಾಲಕ್ಕೆ ಮನೆಯನ್ನು ಕೂಡ ಅದರಲ್ಲಿ ಸೇರಿಸುವಂತೆ ನಾನು ಹೇಳಿದ್ದೇನೆ, ಆದರೆ ಮಾಡಿಕೊಡುತ್ತೇವೆಂದು 1 ನೇ ಪ್ರತಿವಾದಿ ಹೇಳುತ್ತಾ ಬಂದಿರುವರು.

ನಿಡಿ-7 ನ್ನು ದಿಃ05.02.2014 ರಂದು ಮಾಡಿಕೊಂಡಿದ್ದೇವೆ ಎಂದರೆ ಸರಿ. ಅಂದಿನಿಂದ ಇಂದಿನವರೆಗೂ ಡೋರ್ ನಂ.10 ಮತ್ತು 11 ನ್ನು ಬರೆದುಕೊಡುವಂತೆ ನಾವು ಈ ವರೆಗೆ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿ. ಆದರೆ ಪರಿಚಯದವರ ಮುಖಾಂತರ ತಿಳಿಸಿರುತ್ತೇನೆ. ನಾನು ಮತ್ತು 1 ನೇ ಪ್ರತಿವಾದಿ ಮಾಡಿಕೊಂಡ ರಾಜಿ ಡಿಕ್ರಿ ಹಾಗೂ ನಿಡಿ-7 ಇವೆರಡು ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ನಿಡಿ-9 ರಂತೆ ನಾನು ದಾವಾ ಆಸ್ತಿಯನ್ನು ಸ್ವಾಧೀನ ಪಡೆದಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಈಗಲೂ ವಾದಿಯರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವು ದಾಖಲೆಗಳನ್ನು ಸೃಷ್ಟಿಸಿ ವಾದಿಯರನ್ನು ದಾವಾ ಆಸ್ತಿಯಿಂದ ಪ್ರಯತ್ನ ಪಡುತ್ತಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

29.08.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**

O.S. 264/2013
D.W.1